# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾವೇರಿ

## ಪ್ರಕರಣ ಸಂಖ್ಯೆಃ ಎಸ್.ಸಿ. ನಂ.30/2026

Pw-02

Cw-02

| | |
|---|---|
| ಸಾಕ್ಷಿದಾರರ ಹೆಸರುಃ | ಶ್ರೀ ರಾಮಪ್ಪ ಲಮಾಣಿ |
| ತಂದೆಃಗಂಡನ ಹೆಸರುಃ | ಶ್ರೀ ಸಕ್ರಪ್ಪ |
| ವಯಸ್ಸುಃ | 55 ವರ್ಷ |
| ಉದ್ಯೋಗಃ | ವ್ಯವಸಾಯ |
| ವಾಸ ಸ್ಥಳಃ | ಭೈರಾಪುರ, ತಾಃ ಸವಣೂರು |

**ದಿನಾಂಕ:03.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಈಗ್ಗೆ 1 ½ ವರ್ಷಗಳ ಹಿಂದೆ ಪೊಲೀಸರು ನಮ್ಮೂರಿನ ನಮ್ಮ ಮನೆ ಹತ್ತಿರ ಬಂದು ನನ್ನ ಹೆಬ್ಬೆಟ್ಟಿನ ಗುರುತು ತೆಗೆದುಕೊಂಡಿರುತ್ತಾರೆ ಸದರಿ ದಾಖಲಾತಿಯನ್ನು ಈಗ ನೋಡುತ್ತಿದ್ದು, ಅದು ದಿನಾಂಕಃ05.02.2025 ರ ಸ್ಥಳ ಪಂಚನಾಮೆಯಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ನಿಲ್ಲಿಸಿ ಪೋಟೋ ತೆಗೆದುಕೊಂಡಿರುತ್ತಾರೆ. ಸದರಿ ಪೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಕ್ರಮವಾಗಿ ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

2. ಪೊಲೀಸರು ನನ್ನನ್ನು ಎಲ್ಲಿಗೂ ಕರೆಸಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿಲ್ಲ. ಪಂಚನಾಮೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಟೋಗಳನ್ನು ಏಕೆ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಪಿ.ಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿ ವಿಚಾರಣೆಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಪಿ.ಪಿ ರವರಿಂದಃ**

3. ದಿನಾಂಕಃ05.02.2025 ರಂದು ಮಧ್ಯಾಹ್ನ 1.15–2.15 ಗಂಟೆ ಸಮಯದಲ್ಲಿ ಪೊಲೀಸರು ನನ್ನನ್ನು ಮತ್ತು ಚಾಸಾ–3 ರವರನ್ನು ಘಟನಾ ಸ್ಥಳಕ್ಕೆ ಕರೆಸಿ ದ್ಯಾವಕ್ಕ ತೋರಿಸಿದ ಜಾಗದಲ್ಲಿ ನಿಪಿ–3 ರಂತೆ ಸ್ಥಳ ಪಂಚನಾಮೆ ಜರುಗಿಸಿ, ನಿಪಿ–4 ಮತ್ತು 5 ರಂತೆ ಪೋಟೋ ತೆಗೆದು, ಈಗ ನ್ಯಾಯಾಲಯದ ಮುಂದಿರುವ ನನಗೆ ತೋರಿಸುತ್ತಿರುವ ಕುಡಗೋಲನ್ನು ಅಮಾನತ್ತುಪಡಿಸಿಕೊಂಡು ಪಂಚನಾಮೆ ವಿವರಗಳನ್ನು ನನಗೆ ಓದಿ ಹೇಳಿ, ಸ್ಥಳದಲ್ಲಿ ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಮತ್ತು ನಿಪಿ–3 ರಂತೆ ಸ್ಥಳ ಪಂಚನಾಮೆಯನ್ನು ಪೊಲೀಸರು ನನ್ನ ಸಮಕ್ಷಮ ಜರುಗಿಸಿದ್ದರೂ ಸಹ ಮತ್ತು ಪೊಲೀಸರು ನಿಪಿ–4 ಮತ್ತು 5 ರಂತೆ ಪೋಟೋಗಳನ್ನು ತೆಗೆದಿದ್ದರೂ ಸಹ ಹಾಗೂ ಕುಡಗೋಲನ್ನು ವಶಪಡಿಸಿಕೊಂಡಿದ್ದರೂ ಸಹ ಆರೋಪಿ ಜೊತೆ ಪ್ರಕರಣವನ್ನು ರಾಜೀ ಮಾಡಿಕೊಂಡು ಆತನಿಗೆ ಸಹಾಯ ಮಾಡುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಪಿ.ಆರ್.ಎಂ ವಕೀಲರಿಂದಃ**

ಮಾನ್ಯ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇಲ್ಲ ಎಂದು ನುಡಿದಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.